# ಅಧ್ಯಕ್ಷರ ಮಾತು



ಮಂಗಳೂರು ಕಥೋಲಿಕ್ ಕೋ.ಅಪರೇಟಿವ್ ಬ್ಯಾಂಕಿನ 2013–18ನೇ ಸಾಲಿನ ಆಡಳಿತ ಅವಧಿಯ ಕೊನೆಯ ವರ್ಷದ ಹಾಗೂ 100ನೇ ಮಹಾಸಭೆಯ ಸಂದರ್ಭದಲ್ಲಿ ಬ್ಯಾಂಕಿನ ಪಾಲು ಬಂಡವಾಳದಾರರಿಗೆ ಹಾಗೂ ಗ್ರಾಹಕರಿಗೆ ಹೃತ್ಪೂರ್ವಕ ನಮನಗಳು. ಸುಮಾರು 106 ವರ್ಷಗಳ ಹಿಂದೆ ಸಹಕಾರಿ ಮನೋಭಾವವುಳ್ಳವರು ಒಟ್ಟು ಸೇರಿ ಸಹಕಾರಿ ಸಂಘವನ್ನು ರೂಪಿಸಲು ಯೋಜನೆಯನ್ನು ಹಾಕಿ 1912ನೇ ಮೇ 12ರಂದು ಮಂಗಳೂರು ಕಥೋಲಿಕ್ ಕೋಅಪರೇಟಿವ್ ಸೊಸೈಟಿ ಪ್ರಾರಂಭಿಸಿ ಪಿ.ಎಫ್.ಎಕ್ಸ್. ಸಲ್ಡಾನಾ ಇದರ ಮೊದಲ ಅಧ್ಯಕ್ಷರಾದರು. 1927ರಲ್ಲಿ ಸಹಕಾರಿ ಬ್ಯಾಂಕಾಗಿ ರೂಪುಗೊಂಡು 1936 ಇಸವಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕಾಗಿ ರೂಪುಗೊಂಡ ನಮ್ಮ ಬ್ಯಾಂಕ್ ಸದೃಡವಾಗಿ ಹಾಗೂ ಇತರ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಮಾದರಿ ಹಾಗೂ ಅಗ್ರಗಣ್ಯ ಬ್ಯಾಂಕಾಗಿ, ಸಾರ್ವಜನಿಕ ರಂಗದ ಬ್ಯಾಂಕುಗಳ ನಡುವೆ ಸ್ಪರ್ಧಾತ್ಮಕ ಹಾಗೂ ಸೌಲಭ್ಯಗಳನ್ನೊಳಗೊಂಡ ಬ್ಯಾಂಕಾಗಿ, ಹೊರಹೊಮ್ಮಿದೆ ಎಂದು ಹೇಳಲು ಸಂತೋಷಪಡುತ್ತೇನೆ.

ಬ್ಯಾಂಕಿನ ಆಡಳಿತ ಮಂಡಳಿಗೆ ಸದಸ್ಯರು ನೀಡಿದ ಅಧಿಕಾರವು ಒಂದು ಮಹತ್ತರ ಜವಬ್ದಾರಿ ಎಂದು ಪರಿಗಣಿಸಿ, ಬಲಿಷ್ಟ ಧ್ಯೇಯವನ್ನು ಇಟ್ಟುಕೊಂಡು ಕ್ರಿಯಾಶೀಲ ಮತ್ತು ದಕ್ಷತೆಯಿಂದ ಸೇವೆಯನ್ನು ನೀಡಿರುತ್ತೇವೆ. ನಮ್ಮ ಬ್ಯಾಂಕಿನ ಸೌಲಭ್ಯಗಳ ಕೊರತೆಯಿಂದ ಬೇರೆ ಬ್ಯಾಂಕುಗಳಿಗೆ ಅವಲಂಬಿತವಾದ ನಮ್ಮ ಬ್ಯಾಂಕಿನ ಗ್ರಾಹಕರು ಹಾಗೂ ಹೊಸ ಗ್ರಾಹಕರಿಗೆ ಸೌಲಭ್ಯಗಳನ್ನು ಕಲ್ಪಿಸುವಲ್ಲಿ, ಸ್ಪರ್ಧಾತ್ಮಕ ಬಡ್ಡಿದರವನ್ನು ನೀಡುವಲ್ಲಿ ನಮ್ಮ ಆಡಳಿತ ಮಂಡಳಿಯು ಯಶಸ್ವಿಯನ್ನು ಕಂಡಿದೆ ಎಂದು ಹೇಳಲು ಸಂತೋಷಪಡುತ್ತೇನೆ. ಐದು ವರ್ಷದ ಯೋಜನೆಯನ್ನು ಹಾಕಿಕೊಂಡ ಬ್ಯಾಂಕು ನಮ್ಮ ಅವಧಿಯಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿ RTGS/NEFT/CTS, Anywhere Banking, SMS, IMPS, ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಗ್ರಾಹಕರ ಅನುಕೂಲಕ್ಕಾಗಿ E-Stamping ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಮುಖ್ಯವಾದ ಯೋಜನೆಗಳಾದ ಎಟಿಎಮ್ ವ್ಯವಸ್ಥೆ ಹಾಗೂ ಎನ್‌ಆರ್‌ಇ ಸೌಲಭ್ಯಗಳನ್ನು ನೀಡಿ ಯುವ ಗ್ರಾಹಕರನ್ನು ಆಕರ್ಷಿಸಿರುತ್ತೇವೆ. 10000 ಎಟಿಎಮ್ ರುಪೆ ಕಾರ್ಡ್‌ಗಳನ್ನು ವಿತರಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು ಸುಮಾರು 4500 ಎಟಿಎಮ್ ಕಾರ್ಡುಗಳನ್ನು ಈಗಾಗಲೇ ವಿತರಿಸಿ ಬ್ಯಾಂಕಿನ ವ್ಯವಹಾರ ವೃದ್ದಿಯ ಜೊತೆಗೆ ಗ್ರಾಹಕರು ಇ–ಕಾಮರ್ಸ್, POS ಸೌಲಭ್ಯಗಳನ್ನು ಪಡೆಯಲು ಅನುವು ಮಾಡಲಾಗಿದೆ.

ನಮ್ಮ ಆಡಳಿತದ ಐದು ವರ್ಷದ ಅವಧಿಯಲ್ಲಿ ಕೇಂದ್ರ ಸರಕಾರವು ಜಾರಿಗೆ ತಂದ ಡಿಮೋನಿಟೈಶನ್ ಸಂದರ್ಭದಲ್ಲಿ ವ್ಯವಹಾರಕ್ಕೆ ಅಡಚಣೆ ಉಂಟಾದರೂ, ಕೆಲವು ರಾಷ್ಟ್ರಿಕೃತ ಬ್ಯಾಂಕುಗಳು ನಷ್ಟವನ್ನು ಕಂಡರೂ ಕೂಡ ನಮ್ಮ ಬ್ಯಾಂಕು ಗರಿಷ್ಟ ಲಾಭವನ್ನು ಗಳಿಸಿದೆ. ನಮ್ಮ ಅವಧಿಯಲ್ಲಿ ಬ್ಯಾಂಕಿನ ಆಸ್ತಿ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಡೆಟ್ ಫಂಡಲ್ಲಿ ಹೂಡಿಕೆ ಮಾಡಿದ ರೂ.21.50 ಕೋಟಿಯಲ್ಲಿ ರೂ.5 ಕೋಟಿ ಹೂಡಿಕೆಯನ್ನು ಪ್ರಸಕ್ತ ಸಾಲಿನಲ್ಲಿ ಮೂರು ವರ್ಷಗಳ ಅವಧಿಯ ನಂತರ ಹಿಂಪಡೆದಿದ್ದು, Indexation benefit ನಂತರ ರೂ.1.48 ಕೋಟಿ ಲಾಭಾಂಶವು ಬಂದಿರುತ್ತದೆ. ಉಳಿದ ರೂ.16.50 ಕೋಟಿ ಹೂಡಿಕೆಯು ಮೂರು ವರ್ಷಗಳ ಅವಧಿಯು 2018 ಎಪ್ರಿಲ್ ತಿಂಗಳಲ್ಲಿ ಪೂರ್ಣಗೊಂಡಿದ್ದು, 2018–19 ಸಾಲಿಗೆ ರೂ.4.87 ಕೋಟಿ ನಿವ್ವಳ ಲಾಭವು ಸೇರ್ಪಡೆಯಾಗುವುದು. 2008–13ನೇ ಆಡಳಿತಾವಧಿಯ ಐದು ವರ್ಷಗಳ ನಿವ್ವಳ ಲಾಭವು ರೂ.651.86 ಲಕ್ಷಗಳಾಗಿದ್ದು, ಈಗ ನಮ್ಮ ಐದು ವರ್ಷದ ಅವಧಿಯಲ್ಲಿ ರೂ.1589.98 ಲಕ್ಷ ಲಾಭ ಬಂದಿದ್ದು ಶೇಕಡಾ 143.92 ಏರಿಕೆ ಕಂಡಿದೆ. ಮೀಸಲು ನಿಧಿಗೆ ಹಿಂದಿನ ಅವಧಿಯಲ್ಲಿ ರೂ.436.09 ಲಕ್ಷ ವರ್ಗಾಯಿಸಿದ್ದು, ನಮ್ಮ ಅವಧಿಯಲ್ಲಿ ಮೀಸಲು ನಿಧಿಗೆ ರೂ.861.06 ಲಕ್ಷ ಲಾಭಾಂಶವನ್ನು ವರ್ಗಾಯಿಸಿ, ಶೇಕಡಾ 98 ಏರಿಕೆ ಕಂಡಿದೆ. 2008–13ರ ಆಡಳಿತ ಅವಧಿಯಲ್ಲಿ ಪಾಲು ಬಂಡವಾಳದಲ್ಲಿ ರೂ.304.51 ಲಕ್ಷ ಏರಿಕೆಯಾಗಿದ್ದು, ನಮ್ಮ ಅವಧಿಯಲ್ಲಿ ರೂ.745.17 ಲಕ್ಷ ಏರಿಕೆಯಾಗಿ, ಶೇಕಡಾ 144.72 ಬೆಳವಣಿಗೆಯಾಗಿದೆ.

ಠೇವಣಿ ಹಾಗೂ ಸಾಲಗಳಲ್ಲಿ ಸಮತೋಲನ ಕಾಪಾಡಿ ಅಧಿಕ ಲಾಭಾಂಶ ಪಡೆಯಲು ಸಫಲರಾಗಿದ್ದೇವೆ ಎಂದು ಹೇಳಲು ಆಡಳಿತ ಮಂಡಳಿಯು ಸಂತೋಷಪಡುತ್ತದೆ. ನಮ್ಮ ಆಡಳಿತ ಅವಧಿಯಲ್ಲಿ ಸಹಕಾರ ರಂಗದಲ್ಲಿ ಸಲ್ಲಿಸುತ್ತಿರುವ ಸೇವೆ ಮತ್ತು ಕಾರ್ಯಸಾಧನೆಯನ್ನು ಪರಿಗಣಿಸಿ ನಮ್ಮ ಬ್ಯಾಂಕಿಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ ಹಾಗೂ ಮೈಸೂರು ವಿಭಾಗದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲೇ ದುಡಿಯುವ ಬಂಡವಾಳದಲ್ಲಿ ಪ್ರಥಮ ಸ್ಥಾನವನ್ನು ಹೊಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಬ್ಯಾಂಕಿಗೆ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಧರ್ಮಾರ್ಥ ನಿಧಿಯನ್ನು ಮೀಸಲು ಇಡಲು ಅವಕಾಶವಿರುವುದರಿಂದ ನಮ್ಮ ಅವಧಿಯಲ್ಲಿ ನಾಲ್ಕು ವರ್ಷಗಳಿಂದ ಶೇಕಡಾ 10ರಷ್ಟು ಮೀಸಲಿಟ್ಟಿದ್ದು, ಈಗಾಗಲೇ ರೂ.66.92 ಲಕ್ಷ ತಲುಪಿದ್ದು, ಮುಂದಿನ ವರ್ಷಗಳಲ್ಲಿ ಮುಂದುವರಿಸಿಕೊಂಡು ಹೋದರೆ ಸಮಾಜದಲ್ಲಿ ಅವಕಾಶ ವಂಚಿತರ ಒಳಿತಿಗಾಗಿ ಈ ಮೊತ್ತವನ್ನು ಬಳಸಿ ಉತ್ತಮ ಕೆಲಸವನ್ನು ಮಾಡುವುದು ನಮ್ಮ ಕರ್ತವ್ಯ ಎಂದು ಭಾವಿಸುತ್ತೇನೆ. ಇದು ನಮ್ಮ ಅವಧಿಯಲ್ಲಿ ಮಾಡಿದಂತಹ ಯೋಜನೆ. ನಮ್ಮ ಅವಧಿಯಲ್ಲಿ ಸಾಧಿಸಲಾಗದ ಒಂದು ಅಂಶವೆಂದರೆ ಹೊಸ ಶಾಖೆಗಳನ್ನು ತೆರೆಯುವುದು. ಈಗ ಎನ್‌ಪಿಎ ಪ್ರಮಾಣವು ಒಟ್ಟು ಶೇಕಡಾ 8.24 ಇದ್ದು, ಮುಂದಿನ ವರ್ಷದಲ್ಲಿ ಎನ್‌ಪಿಎ ಪ್ರಮಾಣವು ಒಟ್ಟು ಶೇಕಡಾ 7 ಬಂದಲ್ಲಿ ಹೊಸ ಶಾಖೆಗಳನ್ನು ತೆರೆಯಲು ಅವಕಾಶ ಲಭಿಸುವುದು.

*(2ನೇ ಪುಟಕ್ಕೆ)*

# ಮಂಗಳೂರು ಕೆಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ
## ಸೈಂಟ್ ಆಲೋಶಿಯಸ್ ಕಾಲೇಜು ರಸ್ತೆ, ಹಂಪನಕಟ್ಟ, ಮಂಗಳೂರು
# ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಮಂಗಳೂರು ಕೆಥೋಲಿಕ್ ಕೋ.ಓಪರೇಟಿವ್ ಬ್ಯಾಂಕ್ (ನಿ.) ಇದರ 100ನೇ ವಾರ್ಷಿಕ ಸಾಮಾನ್ಯ ಸಭೆಯು **2018ನೇ ಜುಲೈ ತಿಂಗಳ 15ನೇ ತಾರಿಕು ರವಿವಾರ ಬೆಳಿಗ್ಗೆ 11.00** ಘಂಟೆಗೆ ಸರಿಯಾಗಿ **ಸೈಂಟ್ ಸೆಬಾಸ್ಟಿಯನ್ ಪ್ಲಾಟಿನಮ್ ಜುಬಿಲಿ ಹೊಲ್, ಬೆಂದೂರ್, ಮಂಗಳೂರು** ಇಲ್ಲಿ ಜರಗಲಿದ್ದು, ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು.

1. ಸಭೆಯ ನೋಟೀಸನ್ನು ಓದಿ ದಾಖಲಿಸುವುದು (ಪುಟ 2)
2. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು
3. 2017–18ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಲಿಯ ವರದಿಯನ್ನು ಓದಿ ಅಂಗೀಕರಿಸುವುದು (ಪುಟ 3–4)
4. 2017–18ರ ಲಾಭ ನಷ್ಟ ಹಾಗೂ ಆಸ್ತಿ ಜವಾಬ್ದಾರಿ ತ:ಖ್ತೆಯನ್ನು ಮಂಜೂರು ಮಾಡುವುದು. (ಪುಟ 6–11)
5. 2017–18ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಮಂಡಲಿಯ ಅನುಪಾಲನಾ ವರದಿಯನ್ನು ಪರಿಗಣಿಸುವುದು. (ಪುಟ 12)
6. 2018–19ನೇ ಸಾಲಿನ ಆಡಳಿತ ಮಂಡಲಿಯವರು ಸೂಚಿಸಿದ ಕಾರ್ಯವ್ಯವಹಾರಗಳ ಅನುಮೋದನೆ. (ಪುಟ 5)
7. 2017–18ನೇ ಸಾಲಿಗೆ ಮಂಜೂರಾಗಿದ್ದ ಬಜೆಟಿನ ಮಿತಿಗಿಂತ ಹೆಚ್ಚಿಗೆ ಆದ ವೆಚ್ಚವನ್ನು ಮಂಜೂರು ಮಾಡುವುದು. (ಪುಟ 14)
8. 2018–19ನೇ ಸಾಲಿನ ವಾರ್ಷಿಕ ಬಜೆಟನ್ನು ಪರಿಶೀಲಿಸಿ ಮಂಜೂರು ಮಾಡುವುದು. (ಪುಟ 13)
9. 2017–18ನೇ ಸಾಲಿನ ನಿವ್ವಳ ಲಾಭ ವಿಂಗಡನೆಗೆ ಮಂಜೂರಿ ಕೊಡುವುದು. (ಪುಟ 14)
10. 2018–19ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ. (ಪುಟ 5)
12. ಪ್ರಸ್ತುತ ಉಪವಿಧಿಗಳಿಗೆ ತಿದ್ದುಪಡಿಗಳನ್ನು ಅಂಗೀಕರಿಸುವುದು. (ಪುಟ 15–16)
13. ಮುನ್ಸೂಚನೆಯ ಮೇರೆಗೆ ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು

(ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ)

12.06.2018 ಮಹಾಪ್ರಬಂಧಕರು (ಪ್ರ)

**ಸೂಚನೆ :**

1. **ಬ್ಯಾಂಕಿನ ಲೆಕ್ಕ ಪತ್ರಗಳಿಗೆ ಸಂಬಂಧಪಟ್ಟ ಹಾಗೂ ಇತರ ಯಾವುದೇ ಮಾಹಿತಿಗಳ ಬಗ್ಗೆ 7 ದಿವಸಗಳ ಮುಂಚಿತವಾಗಿ ಬ್ಯಾಂಕಿನ ಮಹಾಪ್ರಬಂಧಕರ ಗಮನಕ್ಕೆ ತರತಕ್ಕದ್ದು.**
2. **ಸದಸ್ಯರಿಗೆ ಗುರುತಿನ ಚೀಟಿ ಕಡ್ಡಾಯವಾಗಿದೆ. ಸದಸ್ಯರು ಮಹಾಸಭೆಗೆ ಬರುವಾಗ ಗುರುತು ಚೀಟಿಯನ್ನು ಹಾಗೂ ವರದಿ ಪುಸ್ತಕವನ್ನು ತಪ್ಪದೇ ತರಬೇಕಾಗಿ ವಿನಂತಿ.**

(ಸಭೆಯ ನಂತರ ಸದಸ್ಯರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.)

---

***(ಮೊದಲನೆ ಪುಟದಿಂದ)***

ನಮ್ಮ ಗ್ರಾಹರಿಗೆ ಮತ್ತು ಮುಂದಿನ ಪೀಳಿಗೆಗೆ ಬೇಕಾದಂತಹ ಪ್ರಾಥಮಿಕ ಹಂತದ ಎಲ್ಲಾ ಸೌಲಭ್ಯಗಳು ಈಗ ಲಭ್ಯವಿದೆ. ಸಾಲಗಳಿಗೆ ಆಕರ್ಷಕ ಬಡ್ಡಿ ದರವನ್ನು ನಿಗದಿಪಡಿಸಿರುವುದರಿಂದ ನಮ್ಮ ಗ್ರಾಹಕರು ಹಾಗೂ ಸದಸ್ಯರಲ್ಲಿ ನಮ್ರ ವಿನಂತಿ ಏನೆಂದರೆ ಪ್ರತಿ ಮನೆಯಲ್ಲಿ ನಮ್ಮ ಬ್ಯಾಂಕಿನ ಒಂದು ಸದಸ್ಯ ಮತ್ತು ಒಂದು ಖಾತೆ ಇಲ್ಲದಿದ್ದಲ್ಲಿ ಅವರಿಗೆ ನಮ್ಮ ಬ್ಯಾಂಕಿನಲ್ಲಿ ವ್ಯವಹರಿಸುವಂತೆ ಪ್ರೋತ್ಸಾಹಿಸಲು ನಿಮ್ಮ ಸಹಕಾರವನ್ನು ಕೋರುತ್ತೇನೆ. ನಿಮ್ಮ ಸಹಕಾರದಿಂದ ನಮ್ಮ ಬ್ಯಾಂಕು ಇನ್ನೂ ಉತ್ತುಂಗಕ್ಕೆ ಏರಿ ಈ ಬ್ಯಾಂಕು 'ನಮ್ಮ ಬ್ಯಾಂಕು' ಎಂದು ದೃಢವಾಗಿ ಹೇಳುವಂತಹ ಧೈರ್ಯವನ್ನು ಮಾಡೋಣ ಅಂತ ಹೇಳಬಯಸುತ್ತೇವೆ. ನಮ್ಮ ಆಡಳಿತ ಅವಧಿಯ ಐದು ವರ್ಷ ಪೂರ್ಣಗೊಂಡಿದ್ದು, ಬ್ಯಾಂಕಿನ ಎರಡನೇ ಶತಮಾನದ ಪ್ರಥಮ ಅಧ್ಯಕ್ಷನಾಗುವ ಅವಕಾಶ ಹಾಗೂ 100ನೇ ಮಹಾಸಭೆಯನ್ನು ಪೂರೈಸುವಂತಹ ಅವಕಾಶವನ್ನು ನೀವು ನೀಡಿರುತ್ತೀರಿ. ನಮ್ಮ ಎಲ್ಲಾ ಸದಸ್ಯರಿಗೆ, ಆಡಳಿತ ಮಂಡಳಿಯ ನಿರ್ದೇಶಕರಿಗೆ, ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ಆಡಳಿತ ಅವಧಿಯ ಎಲ್ಲಾ ಏರುಪೇರುಗಳಲ್ಲಿ ನನ್ನನ್ನು ಅಶೀರ್ವದಿಸಿ ಮುನ್ನಡೆಸಿ ಐದು ವರ್ಷಗಳನ್ನು ಪೂರೈಸುವ ಶಕ್ತಿಯನ್ನು ನೀಡಿದ ದೇವರಿಗೆ ನಮಿಸುತ್ತಾ, ಆ ಪರಮಾತ್ಮನ ಆಶೀರ್ವಾದದಿಂದ ಬ್ಯಾಂಕಿನ ಏಳಿಗೆಯನ್ನು ನಾವೆಲ್ಲರೂ ಕೈಜೋಡಿಸಿ ಮಾಡೋಣ ಎಂದು ಆಶಿಸುತ್ತೇನೆ.

**– ಪ್ರಾನ್ಸಿಸ್ ಕುಟಿನ್ಹೊ, ಅಧ್ಯಕ್ಷರು**

**ಕಾರ್ಯಸೂಚಿ – 3**

# ಮಂಗಳೂರು ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

## ವಾರ್ಷಿಕ ವರದಿ

ಬ್ಯಾಂಕಿನ 100ನೇ ವಾರ್ಷಿಕ ಮಹಾಸಭೆಗೆ ಸದಸ್ಯರೆಲ್ಲರನ್ನೂ ಸ್ವಾಗತಿಸುತ್ತಾ, 2017–18ನೇ ಸಾಲಿನ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ಈ ಬ್ಯಾಂಕು ಅವಿಭಜಿತ ದ.ಕ. ಜಿಲ್ಲೆಯಲ್ಲಿ 16 ಶಾಖೆಗಳನ್ನೊಳಗೊಂಡು, ರೂ.307.79 ಕೋಟಿ ಠೇವಣಿ ಹಾಗೂ ರೂ.202.24 ಕೋಟಿ ಸಾಲಗಳನ್ನೊಳಗೊಂಡ ಒಟ್ಟು ರೂ.510.03 ಕೋಟಿ ವ್ಯವಹಾರ ಮಾಡುತ್ತಿದ್ದು, ಈ ವರ್ಷ ದಾಖಲೆಯ ಲಾಭವನ್ನು ಗಳಿಸಿರುತ್ತದೆ. ಈ ಸಾಧನೆಗೆ ಬ್ಯಾಂಕಿನಲ್ಲಿ ವೃದ್ಧಿಗೊಂಡ ವಿವಿಧ ಸೌಲಭ್ಯಗಳು ಹಾಗೂ ಸೇವೆಯು ಕಾರಣವಾಗಿರುತ್ತದೆ. ಬ್ಯಾಂಕಿನಲ್ಲಿ ಶ್ರಮಿಸುತ್ತಿರುವ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದ ಶ್ರಮ, ಸದಸ್ಯರ ಹಾಗೂ ಗ್ರಾಹಕರ ಪ್ರೋತ್ಸಾಹ, ಬೆಂಬಲ ಮತ್ತು ಸಹಕಾರದ ಫಲವು ಸಹ ಕಾರಣವಾಗಿರುತ್ತದೆ. ವರದಿ ವರ್ಷದಲ್ಲಿ ಠೇವಣಿಗಳು ಹಾಗೂ ಸಾಲಗಳ ಮೇಲಿನ ಬಡ್ಡಿಯಲ್ಲಿ ಕಡಿತ ಮಾಡಿದರೂ ಸಹ ಸದಸ್ಯರಿಗೆ ಈ ವರ್ಷವೂ ಶೇಕಡಾ 10ರ ದರದಲ್ಲಿ ಲಾಭಾಂಶ ನೀಡಲು ನಿರ್ಧರಿಸಲಾಗಿದೆ.

ಪ್ರಸ್ತುತ ಸಹಕಾರಿ ವರ್ಷದ ಆದಾಯ ವೆಚ್ಚದ ವಿವರ ಹಾಗೂ ವಾರ್ಷಿಕ ವರದಿಯೊಂದಿಗೆ ಲೆಕ್ಕ ಪತ್ರದ ಸಂಕ್ಷಿಪ್ತ ಪಟ್ಟಿಯನ್ನು ತಮ್ಮ ಮುಂದೆ ಮಂಡಿಸಲು ಬಯಸುತ್ತೇವೆ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕಿನ ಸಾಧನೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ. **ರೂ. ಲಕ್ಷಗಳಲ್ಲಿ**

| ಕ್ರ. ಸಂ. | ವಿವರಗಳು | ವರ್ಷಾಂತ್ಯಕ್ಕೆ | | | | |
|---|---|---|---|---|---|---|
| | | 31.03.2014 | 31.03.2015 | 31.03.2016 | 31.03.2017 | 31.03.2018 |
| 1. | ಪಾಲು ಬಂಡವಾಳ | 716.13 | 784.28 | 892.65 | 1323.85 | 1420.80 |
| 2. | ಮೀಸಲು ನಿಧಿ ಮತ್ತು ಇತರ ನಿಧಿಗಳು | 2412.76 | 2621.99 | 2763.77 | 2878.77 | 3072.83 |
| 3. | ಠೇವಣಿ | 27611.32 | 28434.20 | 28931.51 | 30461.54 | 30779.40 |
| 4. | ಸಾಲ ಮತ್ತು ಮುಂಗಡ | 15380.87 | 14564.29 | 15889.08 | 19138.88 | 20224.62 |
| 5. | ಹೂಡಿಕೆ | 14303.36 | 15556.29 | 15053.95 | 13711.48 | 14310.03 |
| 6. | ಎನ್.ಪಿ.ಎ. (ಶೇಕಡವಾರು) | 1.41% | 1.53% | 2.74% | 1.56% | 1.76% |
| 7. | ನಿವ್ವಳ ಲಾಭ | 122.40 | 219.28 | 175.82 | 219.44 | 366.33 |

ವರ್ಷದ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳವು ರೂ. 36041.78 ಲಕ್ಷವಿರುತ್ತದೆ.

**ಆಡಳಿತ:**

ವರದಿ ವರ್ಷದಲ್ಲಿ 10 ಆಡಳಿತ ಮಂಡಳಿಯ ಸಭೆಗಳು ಜರುಗಿದ್ದು, 51 ಸಾಲ ಮಂಜೂರಾತಿ ಸಮಿತಿ ಸಭೆಗಳು, 6 ಆಡಿಟ್ ಸಮಿತಿ ಹಾಗೂ 10 ಕಾರ್ಯಕಾರಿ ಸಮಿತಿ ಸಭೆಗಳು ಜರಗಿರುತ್ತವೆ.

**CRAR ಪ್ರಮಾಣ :**

ಭಾರತೀಯ ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿದ CRAR ಪ್ರಮಾಣವು ಕಳೆದ ವರ್ಷದಲ್ಲಿ ಶೇಕಡಾ 11.70 ಆಗಿದ್ದು, ವರದಿ ವರ್ಷದಲ್ಲಿ ಶೇಕಡಾ 13.74 ಇದ್ದು, ಇದು ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿದ ಕನಿಷ್ಟ ಮಿತಿ ಶೇ 9ಕ್ಕಿಂತ ಹೆಚ್ಚಿರುತ್ತದೆ.

**ಆಡಿಟ್ ವರ್ಗೀಕರಣ:**

ಸತತ 7 ವರ್ಷಗಳಿಂದ ಬ್ಯಾಂಕಿನ ಲೆಕ್ಕ ಪರಿಶೋಧನೆಯಲ್ಲಿ 'A' ತರಗತಿ ಸಹಕಾರಿ ಸಂಘವಾಗಿ ಗುರುತಿಸಲ್ಪಟ್ಟಿದ್ದು, ಬ್ಯಾಂಕು ಸುಧೃಡವಾಗಿದೆ ಎಂಬುದನ್ನು ತೋರಿಸುತ್ತದೆ.

ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ನಮ್ಮ ಬ್ಯಾಂಕು ವ್ಯವಹರಿಸುತ್ತಿದ್ದು ಎನಿವೇರ್ ಬ್ಯಾಂಕಿಂಗ್ ಸೌಲಭ್ಯ ಲಭ್ಯವಿದೆ. ಬ್ಯಾಂಕಿಗೆ IFSC code ಲಭ್ಯವಿದ್ದು, ಗ್ರಾಹಕರಿಗೆ RTGS/NEFT ಸೌಲಭ್ಯವನ್ನು ಕಲ್ಪಿಸಲಾಗಿದೆ ಸಿಟಿಎಸ್ ವಿನ್ಯಾಸದ ಚೆಕ್‌ಗಳನ್ನು ನಮ್ಮ ಬ್ಯಾಂಕಿನಿಂದಲೇ 24 ತಾಸುಗಳಲ್ಲಿ ವಿಲೇವಾರಿ ಮಾಡಲಾಗುತ್ತದೆ.

24 ತಾಸುಗಳಲ್ಲಿ ವಾಹನ ಸಾಲ ನೀಡುವ ವ್ಯವಸ್ಥೆ ಮಾಡಲಾಗಿದೆ. ಇಎಮ್‌ಐ ಸೌಲಭ್ಯದಡಿ ಕಡಿಮೆ ಬಡ್ಡಿ ದರದಲ್ಲಿ ವಾಹನ ಹಾಗೂ ವಸತಿ ಸಾಲ ನೀಡುವ ಸೌಲಭ್ಯವಿದೆ. ವ್ಯಾಪಾರಸ್ಥರಿಗೆ ಎಸ್‌ಎಮ್‌ಇ ಸಾಲ ಯೋಜನೆಯಡಿ ಕಡಿಮೆ ಬಡ್ಡಿದರದಲ್ಲಿ ಸಾಲಗಳನ್ನು ನೀಡಲಾಗುತ್ತಿದೆ. ಶಾಲಾ ವಾಹನವನ್ನು ಖರೀದಿಸುವ ಶಿಕ್ಷಣ ಸಂಸ್ಥೆಗಳಿಗೆ ವಾಹನ ಸಾಲ ಹಾಗೂ ಇತರ ಉದ್ದೇಶಕ್ಕಾಗಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗಿದೆ. ಚಿನ್ನದ ಮೇಲಿನ ಸಾಲ, ಅಡಮಾನ ಸಾಲ, ವ್ಯಾಪಾರ ಸಾಲಗಳ ಮೇಲೆ ಸ್ಪರ್ಧಾತ್ಮಕ ಬಡ್ಡಿ ದರವನ್ನು ಆಕರಿಸಲಾಗುತ್ತದೆ.

ವರದಿ ವರ್ಷದಲ್ಲಿ ಬ್ಯಾಂಕಿನ ಗ್ರಾಹಕರಿಗೆ ಎಟಿಎಂ (ATM) ಸೌಲಭವನ್ನು ನೀಡಲಾಗಿದ್ದು, ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಬ್ಯಾಂಕಿನ ಸ್ವಂತ ಎಟಿಎಂ ಯಂತ್ರವನ್ನು ಆಳವಡಿಸಲಾಗಿದೆ. ಗ್ರಾಹಕರಿಗೆ ಎಟಿಎಂ ಸೌಲಭ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. ವರದಿ ವರ್ಷದಲ್ಲಿ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ನೀಡಲು ಕ್ರಮ ಕೈಗೊಂಡಿದ್ದು, ಪ್ರಗತಿ ಹಂತದಲ್ಲಿರುತ್ತದೆ. ಬಹು ವರ್ಷಗಳ ಕನಸಾಗಿದ್ದ ಎನ್‌ಆರ್‌ಐ (NRE) ಖಾತೆಗಳನ್ನು ತೆರೆಯಲು ವರದಿ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪರವಾನಿಗೆ ಪಡೆಯಲಾಗಿದೆ. ಅದರಂತೆ ಅನಿವಾಸಿ ಭಾರತೀಯರಿಗೆ ನಮ್ಮ ಬ್ಯಾಂಕಿನಲ್ಲಿ ಎನ್‌ಆರ್‌ಇ ಖಾತೆಯನ್ನು ತೆರೆದು ವ್ಯವಹರಿಸಲು ಹಾಗೂ ಬ್ಯಾಂಕು ನೀಡುತ್ತಿರುವ ಸೌಲಭ್ಯಗಳನ್ನು ಬಳಸಲು ಸಹಕಾರಿಯಾಗಲಿದೆ. ಸದಸ್ಯರಿಗೆ, ಗ್ರಾಹಕರಿಗೆ ಹಾಗೂ ಸಾರ್ವಜನಿಕರಿಗೆ ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಇ–ಸ್ಟ್ಯಾಂಪಿಂಗ್(E-Stamping) ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪ್ರತಿಯೊಬ್ಬ ಸಾಲಗಾರರು ಸಾಲದ ನಿಯಮಗಳನ್ನು ಮುರಿಯದೇ ಮಾಸಿಕ ಕಂತುಗಳನ್ನು ನಿಗದಿತ ಅವಧಿಯೊಳಗೆ ಪಾವತಿಸಿ ಬ್ಯಾಂಕಿನೊಂದಿಗೆ ಸಹಕರಿಸಿ ಬ್ಯಾಂಕು ಇನ್ನೂ ಉನ್ನತಿಯತ್ತ ಸಾಗಲು ಮತ್ತು ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸಹಕರಿಸಲು ತಮ್ಮಲ್ಲಿ ವಿನಂತಿಸುತ್ತೇವೆ.

ಬ್ಯಾಂಕಿನ ಅಭಿವೃದ್ದಿಗೆ ಸೂಕ್ತವಾದ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನವನ್ನು ಸೂಕ್ತ ಸಮಯದಲ್ಲಿ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ಸಹಕಾರಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ, ಅಂತರಿಕ ಲೆಕ್ಕ ಪರಿಶೋಧಕರಿಗೆ, ಶಾಸನಬದ್ದ ಲೆಕ್ಕಪರಿಶೋಧಕರಿಗೆ, ಕಾನೂನು ಸಲಹೆಗಾರರಿಗೆ ಹಾಗೂ ಮೌಲ್ಯಮಾಪಕರುಗಳಿಗೆ ನಮ್ಮ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಬ್ಯಾಂಕಿನ ಪ್ರಗತಿಗೆ ಶ್ರಮಿಸುತ್ತಿರುವ ಆಡಳಿತ ಮಂಡಳಿಯ ಸದಸ್ಯರಿಗೆ, ಸಿಬ್ಬಂದಿ ವರ್ಗ, ಠೇವಣಿದಾರರಿಗೆ, ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಹಾಗೂ ಸದಸ್ಯರಿಗೆ, ಬ್ಯಾಂಕಿನ ಹಿತೈಷಿಗಳಿಗೆ ಹಾಗೂ ಹಿತಚಿಂತಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಇದುವರೆಗೆ ನಮಗೆ ಸಂಪೂರ್ಣ ಸಹಕಾರ ನೀಡಿ ಬ್ಯಾಂಕಿನ ಏಳಿಗೆಗೆ ಕಾರಣೀಕರ್ತರಾದ ತಾವುಗಳು ಮುಂದೆಯೂ ಬ್ಯಾಂಕನ್ನು ಪ್ರಗತಿ ಪಥದಲ್ಲಿ ಬೆಳೆಸಲು ಸಹಕಾರ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ

**ಪ್ರಾನ್ಸಿಸ್ ಕುಟಿನ್ಹೊ, ಆಧ್ಯಕ್ಷರು**

## ಬ್ಯಾಂಕಿನ ಉಪವಿಧಿ ಸಂಖ್ಯೆ 20ರಂತೆ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು

(1) ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು–
   (i) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು;
   (ii) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು **ಐದು ಸಾವಿರ** ರೂಪಾಯಿಗಳು; ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ; **ಅಥವಾ** ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಹತ್ತು ಇರತಕ್ಕದ್ದು.

(2) ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ)ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.

(3) ರಿಸರ್ವ್ ಬ್ಯಾಂಕು ನೀಡಿರುವ 'ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ)' ನಿರ್ದೇಶನವನ್ನು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯಯಿಸತಕ್ಕದ್ದು.

**ಕಾರ್ಯಸೂಚಿ–6**

## ಮಂಗಳೂರು ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

## 2018–19ನೇ ವರ್ಷದ ಕಾರ್ಯಕ್ರಮ

1. ಸದಸ್ಯರು ರೂ. 4.11 ಕೋಟಿವರೆಗೆ ಭದ್ರತಾ ಸಾಲಗಳನ್ನು ಅಥವಾ ನಿಗದಿತ ಮಿತಿಯೊಳಗೆ ಹೆಚ್ಚುವರಿ ಭದ್ರತಾ ಸಾಲಗಳನ್ನು ಅವಶ್ಯಕತೆಗಳಿಗನುಗುಣವಾಗಿ ಪಡೆಯಬಹುದು.
2. ಆಭರಣ ಸಾಲದ ಮಿತಿಯನ್ನು ಸದಸ್ಯರಿಗೆ ರೂ. 30.00 ಲಕ್ಷ ಹಾಗೂ ಸಹಸದಸ್ಯರಿಗೆ ರೂ. 10.00 ಲಕ್ಷದವರೆಗೆ ನೀಡಲಾಗುವುದು.
3. ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ರೂ. 10.00 ಲಕ್ಷದವರೆಗೆ ಸಾಲವನ್ನು ನೀಡಲಾಗುವುದು.
4. ಸದಸ್ಯರಿಗೆ ಹೊಸ ವಾಹನಗಳನ್ನು ಖರೀದಿಸಲು ವಾಹನ ಸಾಲವನ್ನು ಖರೀದಿ ಕ್ರಯದ ಶೇಕಡಾ 85ರಷ್ಟು, 9.25 ಬಡ್ಡಿ ದರದಲ್ಲಿ ನೀಡಲಾಗುವುದು. ಸಾಲ ಮರುಪಾವತಿ ಮಾಡಲು ಗರಿಷ್ಟ 84 ತಿಂಗಳ ಕಾಲಾವಧಿಯನ್ನು ನೀಡಲಾಗುತ್ತದೆ. ಮನೆ ಕಟ್ಟಡ ನಿರ್ಮಾಣ ಹಾಗೂ ಖರೀದಿಗೆ ಶೇಕಡಾ 9.50ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುವುದು.
5. ಪ್ರತಿ ಕುಟುಂಬದಲ್ಲೊಂದು ಎಂ.ಸಿ.ಸಿ. ಬ್ಯಾಂಕ್ ಖಾತೆ ಹಾಗೂ ಸದಸ್ಯತ್ವ ಹೊಂದುವ ಕಾರ್ಯಾಚರಣೆ.
6. ಎಸ್ಎಮ್ಎಸ್ ಬ್ಯಾಂಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು.
7. ಬ್ಯಾಂಕಿನ ಕಂಕನಾಡಿ, ಬಜಪೆ, ಬಿ.ಸಿ.ರೋಡ್ ಹಾಗೂ ಕಾರ್ಕಳ ಶಾಖೆಗಳಲ್ಲಿ ಎಟಿಎಂ ಯಂತ್ರಗಳನ್ನು ಆಳವಡಿಸಲು ಕ್ರಮ ಕೈಗೊಳ್ಳುವುದು.
8. ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಇ–ಸ್ಟ್ಯಾಂಪಿಂಗ್ (E-Stamping) ವ್ಯವಸ್ಥೆಯನ್ನು ರೂಪಿಸಲು ಕ್ರಮ ಕೈಗೊಳುವುದು.

(ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ)

ಮಂಗಳೂರು
ದಿನಾಂಕ : 12.06.2018 ಮಹಾಪ್ರಬಂಧಕರು (ಪ್ರ)

**ಕಾರ್ಯಸೂಚಿ–11**

## ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ

| | |
|---|---|
| ದಿನಾಂಕ 31.03.2017ಕ್ಕೆ ಇದ್ದಂತೆ ಸದಸ್ಯರ ಸಂಖ್ಯೆ | 25284 |
| 2017–18ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಸದಸ್ಯರ ಸಂಖ್ಯೆ | 2225 |
| 2017–18ನೇ ಸಾಲಿನಲ್ಲಿ ಸಮಾಪನೆ ಮಾಡಿರುವ ಸದಸ್ಯರ ಸಂಖ್ಯೆ | 308 |
| ದಿನಾಂಕ 31.03.2018ಕ್ಕೆ ಇದ್ದಂತೆ ಸದಸ್ಯರ ಸಂಖ್ಯೆ | 27201 |

ಮಂಗಳೂರು
ದಿನಾಂಕ : 12.06.2018 ಮಹಾಪ್ರಬಂಧಕರು (ಪ್ರ)

***ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ ಹೊಂದಿದ 10 ವರ್ಷ ಮತ್ತು ಮೇಲ್ಪಟ್ಟು ಅವಧಿಯವರೆಗೆ ವ್ಯವಹಾರ ನಡೆಸದೇ ಇರುವ (In operative accounts) ಎಲ್ಲಾ ಠೇವುಗಳನ್ನು, ಡಿಪಾಜಿಟ್ ಎಜ್ಯುಕೇಶನ್ ಅವೇರ್‌ನೆಸ್ ಸ್ಕೀಮ್ 2014ರನ್ವಯ ಭಾರತೀಯ ರಿಜರ್ವ್ ಬ್ಯಾಂಕಿಗೆ ಪ್ರತಿ ತಿಂಗಳು ವರ್ಗಾಯಿಸಬೇಕಾಗುತ್ತದೆ. ಕಾರಣ ಎಲ್ಲಾ ಗ್ರಾಹಕರು ತಮ್ಮ ಎಲ್ಲಾ ಠೇವುಗಳು ಚಾಲ್ತಿ ಇರುವಂತೆ ನೋಡಿಕೊಳ್ಳಬೇಕು.***

# ಮಂಗಳೂರು ಕಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ

**ಆಡಳಿತ ಕಛೇರಿ: ಸೈಂಟ್ ಅಲೋಶಿಯಸ್ ಕಾಲೇಜು ರಸ್ತೆ, ಹಂಪನಕಟ್ಟ, ಮಂಗಳೂರು-575001**

**ದಿನಾಂಕ 31.03.2018ಕ್ಕೆ ಇದ್ದಂತೆ ಲಾಭ ಮತ್ತು ನಷ್ಟದ ತ:ಖ್ತೆ**

## Profit and Loss Account as on 31.03.2018

| ದಿನಾಂಕ 31.03.2017ಕ್ಕೆ ಇದ್ದಂತೆ | ವೆಚ್ಚ | | | ದಿನಾಂಕ 31.03.2017ಕ್ಕೆ ಇದ್ದಂತೆ | ಆದಾಯ | | |
|---|---|---|---|---|---|---|---|
| | ವಿವರಗಳು | ಮೊತ್ತ | ಮೊತ್ತ | | ವಿವರಗಳು | ಮೊತ್ತ | ಮೊತ್ತ |
| 213,364,474.00 | ಠೇವಣಿ ಮತ್ತು ಸಾಲದ ಮೇಲಿನ ಬಡ್ಡಿ<br>Interest on Deposits, Borrowings, etc | | 213,393,684.00 | 213,333,217.40 | ಸಾಲಗಳ ಮೇಲಿನ ಬಡ್ಡಿ<br>Interest received on loans | | 232,661,381.90 |
| 37,533,559.00 | ಸಂಬಳ, ಭತ್ಯೆಗಳು ಮತ್ತು ಭವಿಷ್ಯ ನಿಧಿ<br>Salaries, Allowances & Provident Fund | | 41,202,115.04 | 98,739,361.70 | ಹೂಡಿಕೆಗಳ ಮೇಲಿನ ಬಡ್ಡಿ<br>Interest on investments | | 98,897,302.34 |
| 163,637.00 | ನಿರ್ದೇಶಕರ ಮತ್ತು ಸ್ಥಳಿಯ ಸಮಿತಿ ಸಭೆಯ ಭತ್ಯೆಗಳು<br>Directors & Local committee meeting allowances | | 141,200.00 | 1,329,779.60 | ಕಮಿಷನ್, ವಿನಿಮಯ ಮತ್ತು ಬ್ರೋಕರೇಜ್<br>Commissioner Exchange and Brokerage | | 1,091,252.52 |
| | | | | 11,509,586.71 | ಇತರ ಜಮೆಗಳು<br>Other receipts | | 11,119,104.60 |
| | ಬಾಡಿಗೆ, ತೆರಿಗೆ, ವಿಮೆ, ಇತ್ಯಾದಿ | | | | | | |
| 3,473,140.50 | ಬಾಡಿಗೆ Rent | 4,193,128.56 | | | | | |
| 4,105,271.00 | ವಿಮೆ Insurance | 4,226,524.40 | | | | | |
| 333,038.00 | ತೆರಿಗೆ Tax | 80,188.65 | | | | | |
| 1,416,079.00 | ವಿದ್ಯುತ್ Lighting | 1,603,121.54 | 10,102,963.15 | | | | |
| 1,584,587.00 | ಗ್ರಾಚ್ಯುಟಿ ಮೇಲೆ ಪ್ರೀಮಿಯಂ<br>Premium on gratuity | | 2,953,406.24 | | | | |
| 75,300.00 | ಕಾನೂನು ವೆಚ್ಚ **Law Charges** | | 88,405.00 | | | | |
| 1,756,092.05 | ಅಂಚೆ, ತಂತಿ ಮತ್ತು ದೂರವಾಣಿ ವೆಚ್ಚ<br>Postage, Telegraph & Telephone charges | | 1,703,183.38 | | | | |
| | ಸವಕಳಿ ಮತ್ತು ದುರಸ್ತಿ | | | | | | |
| 5,286,562.08 | ಸವಕಳಿ Depriciation | 3,604,335.23 | | | | | |
| 1,760,121.65 | ದುರಸ್ತಿ ಮತ್ತು ಸಂರಕ್ಷಣೆ<br>Repairs & Upkeep | 2,126,192.17 | 5,730,527.40 | | | | |
| **270,851,861.28** | **Balance c/f** | | **275,315,484.21** | **324,911,945.41** | **Balance c/f** | | **343,769,041.36** |

| ದಿನಾಂಕ 31.03.2017ಕ್ಕೆ ಇದ್ದಂತೆ | ವೆಚ್ಚ | | | ದಿನಾಂಕ 31.03.2017ಕ್ಕೆ ಇದ್ದಂತೆ | ಆದಾಯ | | |
|---|---|---|---|---|---|---|---|
| | ವಿವರಗಳು | ಮೊತ್ತ | ಮೊತ್ತ | | ವಿವರಗಳು | ಮೊತ್ತ | ಮೊತ್ತ |
| 270,851,861.28 | **Balance b/f** | | 275,315,484.21 | 324,911,945.41 | **Balance b/f** | | 343,769,041.36 |
| | **ಪರೋಕ್ಷ ವೆಚ್ಚಗಳು Indirect expenses** | | | | | | |
| 554,554.00 | ಮುದ್ರಣ ಮತ್ತು ಲೇಖನ ಸಾಮಗ್ರಿ Printing & Stationery | 1,107,722.71 | | | | | |
| 539,775.00 | ಜಾಹಿರಾತು Advertisement | 572,241.02 | | | | | |
| 5,857,761.43 | ಸಾದಿಲ್ವಾರು ವೆಚ್ಚಗಳು Sundry expenses | 3,456,441.24 | | | | | |
| 404,114.00 | ಮಹಾಸಭೆಯ ವೆಚ್ಚಗಳು General Body Expenses | 523,780.70 | | | | | |
| – | ಆಡಳಿತ ಮಂಡಲಿ ಚುನಾವಣಾ ವೆಚ್ಚಗಳು Board election expenses | – | 5,660,185.67 | | | | |
| | **ಕಮಿಷನ್ Commission** | | | | | | |
| 3,702,306.00 | ಸಹಕಾರಿ ನಿಧಿ ಏಜಂಟ್ Sahakari Nidhi Agent | 3,440,451.26 | | | | | |
| 937,383.00 | ಆಭರಣ ಪರೀಕ್ಷಕರು Jewel appraiser | 456,005.81 | 3,896,457.07 | | | | |
| 275,400.00 | **ಲೆಕ್ಕ ಪರಿಶೋಧನಾ ಶುಲ್ಕ ಪಾವತಿ** Audit fees paid | | 223,450.00 | | | | |
| 750.00 | **ಸಾಲಗಳ ಕಾನೂನು ವೆಚ್ಚ** Legal expenses on loans | | 100.00 | | | | |
| 1,010,915.00 | **ಹೂಡಿಕೆಗಳ ಮೇಲೆ ಪ್ರೀಮಿಯಂ** Premium paid on investments | | 1,095,700.00 | | | | |
| 18,765,744.23 | **ಕಾದಿರಿಸಿದ್ದು Provisions** | | 20,784,355.78 | | | | |
| 67,400.70 | **ಬ್ಯಾಂಕಿಂಗೇತರ ಆಸ್ತಿಗಳ ಮಾರಾಟದಿಂದ ಆದ ನಷ್ಟ** Loss on sale of non banking assets | | 159,874.26 | | | | |
| 21,943,980.77 | **ಪ್ರಸ್ತುತ ಲಾಭ** Current Profit | | 36,633,434.37 | | | | |
| **324,911,945.41** | ಒಟ್ಟು ಮೊತ್ತ | | **343,769,041.36** | **324,911,945.41** | ಒಟ್ಟು ಮೊತ್ತ | | **343,769,041.36** |

**ರೊಡ್ರಿಗಸ್ ಮತ್ತು ಡಿ'ಸೋಜ ಇವರ ಪರವಾಗಿ**

**ದಿನಾಂಕ:30.05.2018**
**ಸ್ಥಳ: ಮಂಗಳೂರು**

**ಸುನಿಲ್ ಐ. ಮಿನೇಜಸ್**
ಪ್ರಭಾರ ಮಹಾಪ್ರಬಂಧಕರು

**ಡಿ.ಜೆ.ಪತ್ರಾವೊ**
ನಿರ್ದೇಶಕರು

**ಆಲ್ವಿನ್ ಪತ್ರಾವೊ**
ಉಪಾಧ್ಯಕ್ಷರು

**ಪ್ರಾನ್ಸಿಸ್ ಕುಟಿನ್ಹೊ**
ಅಧ್ಯಕ್ಷರು

**ಮ್ಯಾಕ್ಸಿಮ್ ಎಮ್. ಫೆರ್ನಾಂಡಿಸ್**
ಪಾಲುದಾರರು
ಸದಸ್ಯ ಸಂಖ್ಯೆ 222651

# ಮಂಗಳೂರು ಕಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ

**ಆಡಳಿತ ಕಛೇರಿ: ಸೈಂಟ್ ಅಲೋಶಿಯಸ್ ಕಾಲೇಜು ರಸ್ತೆ, ಹಂಪನಕಟ್ಟ, ಮಂಗಳೂರು-575001**

**ದಿನಾಂಕ 31.03.2018ಕ್ಕೆ ಇದ್ದಂತೆ ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆ**

## Balance Sheet as on 31.03.2018

| ದಿನಾಂಕ 31.03.2017ಕ್ಕೆ ಇದ್ದಂತೆ | ಬಂಡವಾಳ ಮತ್ತು ಹೊಣೆಗಾರಿಕೆಗಳು | | | ದಿನಾಂಕ 31.03.2017ಕ್ಕೆ ಇದ್ದಂತೆ | ಆಸ್ತಿ ಮತ್ತು ಸ್ವತ್ತುಗಳು | | |
|---|---|---|---|---|---|---|---|
| | ವಿವರಗಳು | ಮೊತ್ತ | ಮೊತ್ತ | | ವಿವರಗಳು | ಮೊತ್ತ | ಮೊತ್ತ |
| | | | | | ನಗದು ಶಿಲ್ಕು **Cash** | | |
| 132,384,700.00 | ಪಾವತಿಯಾದ ಶೇರು ಬಂಡವಾಳ Paid up Share Capital | | 142,080,500.00 | 6,538,770.00 | ಕೈಯಲ್ಲಿರುವ ನಗದು Cash in hand | 6,302,113.00 | |
| | | | | | ಎಟಿಎಮ್‌ನಲ್ಲಿರುವ ನಗದು Cash in ATM | 524,600.00 | |
| | | | | 62,808,872.34 | ಇತರ ಬ್ಯಾಂಕುಗಳಲ್ಲಿರುವ ನಗದು cash with other banks | 29,736,281.52 | 36,562,994.52 |
| 287,877,466.10 | ಮೀಸಲು ನಿಧಿ ಮತ್ತು ಇತರ ಮೀಸಲು **Reserve Fund and other reserves** | | 307,282,793.56 | | ಇತರ ಬ್ಯಾಂಕುಗಳಲ್ಲಿರುವ ಶಿಲ್ಕು Balance with other Banks | | |
| | ಠೇವಣಿ ಮತ್ತು ಇತರ ಖಾತೆಗಳು Deposits and other accounts | | | 82,871,658.25 | ಚಾಲ್ತಿ ಖಾತೆಗಳು Current Deposits | 110,013,209.28 | |
| 2,366,998,964.97 | ನಿರಖು ಠೇವಣಿಗಳು Fixed deposits | | 2,369,824,478.75 | 388,343,241.87 | ನಿರಖು ಠೇವಣಿಗಳು Fixed Deposits | 253,488,456.87 | 363,501,666.15 |
| 652,125,260.78 | ಉಳಿತಾಯ ಖಾತೆಗಳು Saving Deposits | | 679,754,317.48 | | ಹೂಡಿಕೆಗಳು **Investments** | | |
| 27,029,865.51 | ಚಾಲ್ತಿ ಖಾತೆಗಳು Current Deposits | | 28,361,292.16 | 683,942,500.00 | ಕೇಂದ್ರ ಮತ್ತು ರಾಜ್ಯ ಸರಕಾರ Central & State Govt | 763,167,500.00 | |
| – | ವಸೂಲಿಗೆ ಬಂದ ಬಿಲ್ಲುಗಳು ಬರತಕ್ಕ ಬಿಲ್ಲುಗಳಿಗೆ (ಕಾಂಟ್ರಾ) **Bills for collection/Receivable** | | 13,700.00 | 5,000.00 | ಸಹಕಾರ ಸಂಘಗಳ ಪಾಲುಗಳಲ್ಲಿ Shares in Co-operative Institutions | 5,000.00 | |
| 3,145,775.00 | ಶಾಖಾ ಹೊಂದಾಣಿಕೆಗಳು **Branch Adjustments** | | 629,427.29 | 288,699,477.98 | ಇತರ ಹೂಡಿಕೆಗಳು Other investments | 304,329,139.67 | 1,067,501,639.67 |
| 554,374,171.65 | ಸುಸ್ತಿ ಸಾಲದ ಬಡ್ಡಿಗೆ ಕಾದಿರಿಸಿದ್ದು **Overdue interest reserve** | 647,619,942.40 | | | ಮುಂಗಡಗಳು **Advances** | | |
| 2,805,139.93 | ಬರತಕ್ಕ ಸಾಲಗಳ ವೆಚ್ಚ Loan charges receivable account | 2,922,388.63 | 650,542,331.03 | 412,241,183.78 | ಅಲ್ಪಾವಧಿ ಮತ್ತು ಬಿಲ್ಲ್ ರಿಯಾಯಿತಿ Short term and Bill discounted | 409,347,441.46 | |
| 7,781,302.00 | ಕೊಡಬೇಕಾದ ಬಡ್ಡಿ Interest payable | | 10,576,827.00 | 267,192,526.66 | ಮಧ್ಯಮಾವಧಿ Medium Term | 241,789,197.47 | |
| 31,998,779.86 | ಇತರ ಹೊಣೆಗಾರಿಕೆಗಳು Other liabilities | | 29,034,430.10 | 1,234,454,645.25 | ದೀರ್ಘಾವಧಿ Long term | 1,371,325,634.67 | 2,022,462,273.60 |
| 4,066,521,425.80 | Balance c/f | | 4,218,100,097.37 | 3,427,097,876.13 | Balance c/f | | 3,490,028,573.94 |

| ದಿನಾಂಕ 31.03.2017ಕ್ಕೆ ಇದ್ದಂತೆ | ಬಂಡವಾಳ ಮತ್ತು ಹೊಣೆಗಾರಿಕೆಗಳು | | | ದಿನಾಂಕ 31.03.2017ಕ್ಕೆ ಇದ್ದಂತೆ | ಆಸ್ತಿ ಮತ್ತು ಸ್ವತ್ತುಗಳು | | |
|---|---|---|---|---|---|---|---|
| | ವಿವರಗಳು | ಮೊತ್ತ | ಮೊತ್ತ | | ವಿವರಗಳು | ಮೊತ್ತ | ಮೊತ್ತ |
| **4,066,521,425.80** | **Balance b/f** | | 4,218,100,097.37 | 3,427,097,876.13 | Balance b/f | | 3,490,028,573.94 |
| 21,943,980.77 | ಲಾಭ ಮತ್ತು ನಷ್ಟ | | 36,633,434.37 | | **ಬರತಕ್ಕ ಬಡ್ಡಿ (ಕಾಂಟ್ರಾ)** | | |
| | Profit and loss account | | | | Interest receiveable as per contra | | |
| | | | | 541,815,043.15 | ಎನ್‌ಪಿಎ ಬಗ್ಗೆ | 635,517,549.65 | |
| | | | | | Non perfoming assets (NPA) | | |
| | | | | 12,559,128.50 | ದಂಡನಾ ಬಡ್ಡಿ Penal interest | 12,102,392.75 | |
| | | | | 2,805,139.93 | ಸಾಲ ಮತ್ತು ಇತರ ಖರ್ಚು | 2,922,388.63 | |
| | | | | | Loan and other charges | | |
| | | | | 22,938,056.00 | ಪ್ರಮಾಣ ವರ್ಗದ ಸಾಲಗಳು | 25,171,598.78 | |
| | | | | | Standard Assets | | |
| | | | | 12,879,191.10 | ಹೂಡಿಕೆಗಳು Investments | 16,636,697.02 | 692,350,626.83 |
| | | | | – | **ಬರತಕ್ಕ ಬಿಲ್ಲುಗಳು ವಸೂಲಾಗತಕ್ಕ ಬಿಲ್ಲುಗಳಿಗೆ** | | 13,700.00 |
| | | | | | **(ಕಾಂಟ್ರಾ)** | | |
| | | | | | Bills for collection/Receivable | | |
| | | | | | **ಸ್ಥಿರ ಆಸ್ತಿಗಳು Fixed Assets** | | |
| | | | | 10,540,667.10 | ಭೂಮಿ–ಆವರಣ, Land-Premises | 10,540,667.10 | |
| | | | | 2,632,282.70 | ಕಟ್ಟಡ, Building | 2,369,054.43 | |
| | | | | 10,381,708.90 | ಪೀಠೋಪಕರಣಗಳು ಮತ್ತು ಜೋಡಣೆಗಳು | 9,353,330.59 | |
| | | | | | Furnitures & Fixtures | | |
| | | | | 3,944,846.05 | ಬ್ಯಾಟರಿ ಮತ್ತು ಯಂತ್ರೋಪಕರಣ | 4,129,282.00 | |
| | | | | | Batters & Machinery | | |
| | | | | 682,041.70 | ಮೋಟಾರು ವಾಹನ, Motor Vehicles | 579,735.45 | |
| | | | | 1,668,603.09 | ಕಂಪ್ಯೂಟರ್, Computer Accessories | 1,706,180.00 | 28,678,249.57 |
| | | | | 38,520,822.22 | **ಇತರ ಆಸ್ತಿಗಳು Other assets** | | 43,662,381.40 |
| **4,088,465,406.57** | **ಒಟ್ಟು ಮೊತ್ತ** | | **4,254,733,531.74** | **4,088,465,406.57** | **ಒಟ್ಟು ಮೊತ್ತ** | | **4,254,733,531.74** |
| | Contigent Liabilities | | | | | | |
| 427,760.00 | TDS Default | 691,940.51 | | | | | |
| 3,960,000.00 | Deaf Accounts with RBI | 4,212,307.00 | | | | | |
| 43,100,000.00 | Income Tax Demand AY 2014-15 | 4,037,000.00 | **8,941,247.51** | | | | |

ದಿನಾಂಕ: 30.05.2018
ಸ್ಥಳ:ಮಂಗಳೂರು

**ಸುನಿಲ್ ಐ. ಮಿನೇಜಸ್**
ಮಹಾಪ್ರಬಂಧಕರು (ಪ್ರ)

**ಡಿ.ಜೆ. ಪತ್ರಾವೊ**
ನಿರ್ದೇಶಕರು

**ಆಲ್ವಿನ್ ಪತ್ರಾವೊ**
ಉಪಾಧ್ಯಕ್ಷರು

**ಫ್ರಾನ್ಸಿಸ್ ಕುಟಿನ್ಹೊ**
ಅಧ್ಯಕ್ಷರು

**ರೊಡ್ರಿಗಸ್ ಮತ್ತು ಡಿ'ಸೋಜ ಇವರ ಪರವಾಗಿ**
**ಮ್ಯಾಕ್ಸಿಮ್ ಎಮ್. ಫೆರ್ನಾಂಡಿಸ್**
ಪಾಲುದಾರರು (ಸದಸ್ಯ ಸಂಖ್ಯೆ 222651)

ಈ ಕೆಳಗೆ ಸಹಿ ಮಾಡಿದ ನಾನು ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಮಂಗಳೂರು ಇದರ 2017–18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ನನ್ನ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ ಲೆಕ್ಕ ಪರಿಶೋಧನೆಗೆ ಅಗತ್ಯವೆಂದು ಕಂಡುಬಂದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದಿದ್ದು ಅವುಗಳು ತೃಪ್ತಿಕರವೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯ ಮತ್ತು ನಾನು ಪಡೆದಂತಹ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಲಗ್ತೀಕರಿಸಿದ ನನ್ನ ನಿಖರವಾದ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟು ಬ್ಯಾಂಕಿನ ಲಾಭ–ನಷ್ಟದ ತ:ಖ್ತೆ ಹಾಗೂ ಆಸ್ತಿ ಹೊಣೆಗಾರಿಕೆ ತೆ:ಖ್ತೆಯು ದಿನಾಂಕ 31.03.2018ರಲ್ಲಿದ್ದಂತೆ ಬ್ಯಾಂಕಿನ ನೈಜ ಹಾಗೂ ಸಮಂಜಸ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

**ರೊಡ್ರಿಗಸ್ ಮತ್ತು ಡಿ'ಸೋಜ ಇವರ ಪರವಾಗಿ**
**ಮ್ಯಾಕ್ಸಿಮ್ ಎಮ್. ಫೆರ್ನಾಂಡಿಸ್**
ಪಾಲುದಾರರು (ಸದಸ್ಯ ಸಂಖ್ಯೆ 222651)

# Notes on Accounts of balance sheet as on 31-03-2018

1. Capital to Risk Weight Asset Ratio (CRAR): 13.74 %
2. Movement of CRAR i.e., CRAR as on Balance Sheet data for the current year vis-a-vis previous year

| Particulars | 31.03.2018 | 31.03.2017 | Movement |
|---|---|---|---|
| CRAR | 13.74 % | 11.70% | Increased |

**3. Investments:**

a. Book value of Investments : 7631.68 lakhs
b. Face value of Investments : 7725.00 lakhs
c. Market value of Investments : 7962.02 lakhs
d. Details of issuer composition of non–SLR investments and non performing non SLR Investments

**Issuer composition of non-SLR Investments**

| No. | Issuer | Amount (in lakhs) | Extent of 'below investment grade securities' | Extent of 'Unrated Securities' | Extent of 'unlisted Securities' |
|---|---|---|---|---|---|
| 1 | PSUs | NIL | NIL | NIL | NIL |
| 2 | FIs | 0.30 | NIL | NIL | NIL |
| 3 | Public Sector Banks | NIL | NIL | NIL | NIL |
| 4 | Mutual Fund | 3043.29 | NIL | NIL | NIL |
| 5 | Others | NIL | NIL | NIL | NIL |
| 6 | Provision held towards depreciation | NIL | NIL | NIL | NIL |

**Non performing non-SLR investments**

| Particulars | Amount (in lakhs) |
|---|---|
| Opening Balance | NIL |
| Additions during the year since 1st April | NIL |
| Reduction during the above period | NIL |
| Closing balance | NIL |
| Total provisions held | NIL |

**4. Advances against** (in lakhs)

| | |
|---|---|
| Real Estate | 214.26 |
| Construction and Business | 592.51 |
| Housing | 3138.26 |

5. Advances against shares and debentures : NIL
6. Advances to Director's, their relatives, Companies / Firms in which they are interested:
   a. Fund Based : 17.85 lakhs
   b. Non fund based (Guarantees, LCs) : NIL
7. Cost of Deposits (average) : 6.97 %
8. NPAs (in lakhs)
   a. Gross NPAs : 1666.81 lakhs
   b. Net NPA : 332.77 lakhs

**9. Movement of NPAs (in lakhs)**

| Particulars | 31.03.2018 | 31.03.2017 | Movement |
|---|---|---|---|
| Gross NPAs | 1666.81 | 1573.10 | Increase |
| Net NPAs | 332.77 | 277.59 | Increase |
| Net NPA (%) | 1.76 | 1.56 | Increase |

**10. Profitability**

a. Interest income as a percentage of working funds : 9.20%
b. Non-interest income as a percentage of working funds : 0.34 %
c. Operating profit as a percentage of working funds : 1.59 %
d. Return on Assets : 0.87 %
e. Business (Deposits + Advances) per employee (in lakhs) : 531.29
f. Profit per employee (in lakhs) : 3.82

**11.** Provisions made towards NPAs, depreciation in investments, standard assets

a. NPAs : 1334.04 lakhs
b. Depreciation in investments : 21.44 lakhs
c. Standard Assets : 76.03 lakhs

**12. Movement in provisions :** (in lakhs)

| Particulars | 31.03.2018 | 31.03.2017 | Movement |
|---|---|---|---|
| NPAs | 1334.04 | 1295.51 | Increase |
| Depreciation in investments | 21.44 | 21.44 | No Change |
| Standard assets | 76.03 | 71.95 | Increase |

13 Foreign Currency assets & liabilities (if applicable) : NIL

14. Payment of DICGC Insurance premium

| Date | Amount paid |
|---|---|
| 11-05-2017 | 17,56,696.00 |
| 16-11-2017 | 18,36,595.82 |

Insurance premium has been paid up to date to DICGC, no arrears.

15. Auditors Remunerations:

| | 31.03.2018 | 31.03.2017 |
|---|---|---|
| Statutory Auditors Fees | 2,95,000.00 | 2,41,054.00 |
| Internal Auditors Fees | 4,13,000.00 | 3,22,750.00 |
| Other services (Tax Audit Fees) | 32,700.00 | 32,400.00 |

16. Penalty imposed by RBI : NIL

17. Restructured accounts : NIL

18. Fixed Assets – Valuation / Revaluation

• No fixed assets are re-valued during this financial year
• No fixed assets are appreciated

19. DEAF (Depositors' Education and Awareness Fund) Accounts: (in lakhs)

| | 31.03.2018 | 31.03.2017 |
|---|---|---|
| Opening balance of amounts transferred to DEAF | 39.60 | 38.63 |
| Add : Amount transferred to DEAF during the year | 4.94 | 1.00 |
| Less : Amount reimbursed by DEAF to claim | 2.42 | 0.03 |
| Closing balance of amounts transferred to DEAF | 42.12 | 39.60 |

# 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಆಡಳಿತ ಮಂಡಲಿಯ ಅನುಪಾಲನಾ ವರದಿ

**1. ಸವಕಳಿ :** ಕೆಲವು ಶಾಖೆಗಳಲ್ಲಿ ಕಂಪ್ಯೂಟರ್ ಮತ್ತು ಉಪ ಸಾಧನಗಳಿಗೆ WDV ಪದ್ಧತಿಯ ಬದಲಾಗಿ SLM ಪದ್ಧತಿಯಲ್ಲಿ (33.33%) ಸವಕಳಿಯನ್ನು ತೆಗೆಯಲಾಗಿದೆ. ಉಳಿದ ಎಲ್ಲಾ ಆಸ್ತಿಗಳಿಗೆ WDV ಪದ್ಧತಿಯಲ್ಲಿ ಸವಕಳಿಯನ್ನು ತೆಗೆಯಲಾಗಿದೆ. ಇದರಿಂದಾಗಿ ಬ್ಯಾಂಕಿನ ಲಾಭಕತ್ವಕ್ಕೆ ಪರಿಣಾಮ ಬೀರಿದೆ.

**ಅನುಪಾಲನಾ ವರದಿ** : ಕಟ್ಟಡ ಮತ್ತು ಇತರ ಆಸ್ತಿಗಳ ಮೇಲೆ ಅದಾಯ ತೆರಿಗೆ ನಿಯಮದಲ್ಲಿ ಸೂಚಿಸಿದ ದರದಲ್ಲಿ WDV ಪದ್ಧತಿಯಲ್ಲಿ ಸವಕಳಿಯನ್ನು ತೆಗೆದಿದ್ದು, ಕಂಪ್ಯೂಟರ್ ಮತ್ತು ಉಪ ಸಾಧನಗಳಿಗೆ ಆರ್‌ಬಿಐ ಸೂಚಿಸಿದ SLM ಪದ್ಧತಿಯಂತೆ 33.33%ರಂತೆ ಸವಕಳಿಯನ್ನು ತೆಗೆಯಲಾಗಿದೆ.

**2. ಸಾಫ್ಟ್‌ವೇರ್** : ಬ್ಯಾಂಕಿನಲ್ಲಿ ಹೊಸ ಸಾಫ್ಟ್‌ವೇರನ್ನು ಅಳವಡಿಸಿ 4 ವರ್ಷಗಳಾಗಿದ್ದು, ಈ ಬಗ್ಗೆ ನಮ್ಮ ವಿಮರ್ಶೆಯು ಈ ಕೆಳಗಿನಂತಿದೆ. ಅಸಾಧಾರಣ ವಹಿವಾಟು (Exceptional Report) ವರದಿಗಳನ್ನು ಸೃಷ್ಟಿಸಲು ಸಿ.ಬಿ.ಎಸ್. ಅಪ್ಲಿಕೇಶನ್ನಲ್ಲಿ ಯಾವುದೇ ಅವಕಾಶವಿಲ್ಲ.

**ಅನುಪಾಲನಾ ವರದಿ :** ಅಸಾಧಾರಣ ವಹಿವಾಟು (Exceptional Report) ವರದಿಗಳನ್ನು ಸೃಷ್ಟಿಸಲು ಸಿ.ಬಿ.ಎಸ್. ಅಪ್ಲಿಕೇಶನ್ನಲ್ಲಿ ಅವಕಾಶವಿದ್ದು, ಅಸಾಧಾರಣ ವಹಿವಾಟು ವರದಿಗಳನ್ನು ಸೃಷ್ಟಿಸಲು ಶಾಖೆಯ ಎಲ್ಲಾ ಸಿಬ್ಬಂದಿಗಳಿಗೆ ಬೇಕಾದ ತರಬೇತಿಯನ್ನು ನೀಡಲು ಸೂಕ್ತ ವ್ಯವಸ್ಥೆ ಮಾಡಲಾಗುವುದು.

**3. ಕರಡು ಮತ್ತು ಸಂಶಯಾಸ್ಪದ ಸಾಲಗಳು :** ವರ್ಷಾನುಗಟ್ಟಲೆ ಲಭಿಸಲು ಇದ್ದ ಬಡ್ಡಿಯು ಹೆಚ್ಚುತ್ತಾ ಇದೆ. ಸಾಲ ವಸೂಲಾತಿ ವಿಭಾಗವನ್ನು ಬಲಪಡಿಸಲು ಶಿಫಾರಸು ಮಾಡುತ್ತೇವೆ.

**ಅನುಪಾಲನಾ ವರದಿ :** ಸಾಲದ ಬಾಕಿ ಮೊತ್ತವನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಸಾಲ ವಸೂಲಾತಿ ವಿಭಾಗವನ್ನು ಬಲಪಡಿಸಲಾಗುವುದು. ಸಾಲ ವಸೂಲಾತಿಯು ನಿರಂತರ ಪ್ರಕ್ರಿಯೆಯಾಗಿದ್ದು, ಸಾಲ ವಸೂಲಾತಿ ವಿಭಾಗವನ್ನು ಗಂಭೀರವಾಗಿ ಪರಿಗಣಿಸಲಾಗುವುದು.

**4. ಭದ್ರತ ಲೋಪ :** 31.03.2017ರಂದು ಬ್ಯಾಂಕಿನ ಉದ್ಯೋಗಿ ಸೈಬರ್ ದಾಳಿಗೆ ಸಂಬಂದಿಸಿದಂತೆ ಮಂಡಳಿಯು ಕ್ರಮಗಳನ್ನು ತೆಗೆದುಕೊಳ್ಳಲು ಶಿಸ್ತು ಅಧಿಕಾರಿಯಾಗಿ ಕಾರ್ಯಕಾರಿ ಸಮಿತಿಯನ್ನು ನೇಮಿಸಿತು. ಆದರೆ ಆ ಸಿಬ್ಬಂದಿ ವಿರುದ್ದ ಇನ್ನೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

**ಅನುಪಾಲನಾ ವರದಿ** : ಈ ವಿಷಯದಲ್ಲಿ ಬ್ಯಾಂಕಿನ ಶಿಸ್ತು ಪ್ರಾಧಿಕಾರವು ವಿಚಾರಣೆ ನಡೆಸಲು ತನಿಖಾಧಿಕಾರಿಯನ್ನು ನೇಮಿಸಿದ್ದು, ಪೂರ್ವಭಾವಿ ವಿಚಾರಣಾ ನೋಟಿಸನ್ನು ನೀಡಲಾಗಿದೆ. ಇಡೀ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಮಹಾಪ್ರಬಂಧಕರು(ಪ್ರ)

## ಸದಸ್ಯರ ಗಮನಕ್ಕೆ

**ಬ್ಯಾಂಕಿನ ಉಪ ವಿಧಿ ಸಂಖ್ಯೆ 47(5)ರಂತೆ ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;**

(ಇ) **ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯನಿಗೆ ಮೂರು ವರ್ಷಗಳ ಕಾಲ ಮತ ಚಲಾಯಿಸುವ ಹಕ್ಕಿರುವುದಿಲ್ಲ;**

(ಎಫ್) **ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿ ಸಂ.20ರಲ್ಲಿದ್ದಂತೆ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯನಿಗೆ ಮೂರು ವರ್ಷಗಳ ಕಾಲ ಮತ ಚಲಾಯಿಸುವ ಹಕ್ಕಿರುವುದಿಲ್ಲ;**

ಕಾರ್ಯಸೂಚಿ–8

# ಮಂಗಳೂರು ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

## 2018–19ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಪಟ್ಟಿ

| | ಅದಾಯ | 2017–18ನೇ ವರ್ಷದ ನೈಜ ಖರ್ಚು | 2018–19ನೇ ವರ್ಷಕ್ಕೆ ಅಂದಾಜು ಅಯವ್ಯಯ |
|---|---|---|---|
| 1. | ಬಡ್ಡಿ ಜಮಾ | 331558684.24 | 356000000.00 |
| 2. | ರುಸುಮು ಮತ್ತು ದಲ್ಲಾಳಿ ಶುಲ್ಕ | 1091252.52 | 1500000.00 |
| 3. | ಇತರ ಜಮೆಗಳು | 11119104.60 | 13000000.00 |
| | **ಒಟ್ಟು** | **343769041.36** | **370500000.00** |

| | **ಖರ್ಚು** | | |
|---|---|---|---|
| 1. | ಠೇವಣಿ ಮತ್ತು ಪಡೆದ ಸಾಲಗಳ ಮೇಲಿನ ಬಡ್ಡಿ | 213393684.00 | 234800000.00 |
| 2. | ಸಂಬಳ ಮತ್ತು ಭತ್ತೆ | 41202115.04 | 50000000.00 |
| 3. | ನಿರ್ದೇಶಕರ ಮತ್ತು ಸ್ಥಳಿಯ ಸಮಿತಿ ಸದಸ್ಯರ ಪೀಸು ಮತ್ತು ಭತ್ಯೆ | 141200.00 | 200000.00 |
| 4. | ಬಾಡಿಗೆ, ತೆರಿಗೆ, ವಿಮಾ ಕಂತು, ವಿದ್ಯುಚಕ್ತಿ, ಇತ್ಯಾದಿ | 10102963.15 | 11500000.00 |
| 5. | ಕಾನೂನು ಖರ್ಚು | 88405.00 | 300000.00 |
| 6. | ಅಂಚೆ, ತಂತಿ ಮತ್ತು ದೂರವಾಣಿ | 1703183.38 | 2000000.00 |
| 7. | ಸವಕಳಿ ಮತ್ತು ರಿಪೇರಿ | 5730527.40 | 7500000.00 |
| 8. | ಲೇಖನ ಸಾಮಾಗ್ರಿ ಮತ್ತು ಮುದ್ರಣ ಖರ್ಚು | 1107722.71 | 1300000.00 |
| 9. | ಲೆಕ್ಕ ಪರಿಶೋಧನೆ | 223450.00 | 450000.00 |
| 10. | ಜಾಹಿರಾತು ಖರ್ಚು | 572241.02 | 750000.00 |
| 11. | ಸಾದಿಲ್ವಾರು ಖರ್ಚು | 3456441.24 | 3700000.00 |
| 12. | ಮಹಾಸಭೆಯ ಖರ್ಚು/ಚುನಾವಣಾ ವೆಚ್ಚ | 523780.70 | 1700000.00 |
| 13. | ಸಹಕಾರಿ ನಿಧಿ ಏಜಂಟ್ ಕಮಿಷನ್ | 3440451.26 | 3800000.00 |
| 14. | ಆಭರಣ ಪರೀಕ್ಷಕರಿಗೆ ಕಮಿಷನ್ | 456005.81 | 0.00 |
| 15. | ಸಾಲಗಳ ವಸೂಲಾತಿಗಾಗಿ ಕಾನೂನು ವೆಚ್ಚ | 100.00 | 0.00 |
| 16. | ಹೂಡಿಕೆಗಳ ಮೇಲಿನ ಪ್ರೀಮಿಯಮ್ | 1095700.00 | 1200000.00 |
| 17. | ಗ್ರಾಚುವಿಟಿ ಬಗ್ಗೆ | 2953406.24 | 3000000.00 |
| 18. | ಬ್ಯಾಂಕಿಗೇತರ ಆಸ್ತಿಗಳಿಂದ ಆದ ನಷ್ಟ | 159874.26 | 200000.00 |
| 19. | **ಕಾದಿರಿಸಿದ್ದು** | | |
| | a) ಕಾಯಿದೆ ಅನ್ವಯ ಲೆಕ್ಕ ಪರಿಶೋಧನೆ ಬಗ್ಗೆ | 244089.00 | 525000.00 |
| | b) ಅಂತರಿಕ ಲೆಕ್ಕ ಪರಿಶೋಧನೆ | 201250.00 | 0.00 |
| | c) ಸಿಬಂಧಿಗಳಿಗೆ ಅಧಿಲಾಭಾಂಶ | 1750340.00 | 2500000.00 |
| | d) ಗಳಿಕೆ ರಜೆ ನಗದೀಕರಣ | 566281.00 | 800000.00 |
| 20. | ಕಾಯ್ದಿರಿಸಿದ ಹಾಗೂ ತೆರಿಗೆ ಮೊದಲಿನ ಲಾಭ | 54655830.15 | 44275000.00 |
| | **ಒಟ್ಟು** | **343769041.36** | **370500000.00** |

ಕಾರ್ಯಸೂಚಿ – 9

## ಮಂಗಳೂರು ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

## 2017–18ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

| | | | |
|---|---|---|---|
| | ನಿವ್ವಳ ಲಾಭ | | 3,66,33,434.37 |
| 1. | ಮೀಸಲು ನಿಧಿ | 25% | 91,58,358.59 |
| 2. | ಸಹಕಾರಿ ಶಿಕ್ಷಣ ನಿಧಿ | 2% | 5,49,501.52 |
| 3. | ಸಹಕಾರ ಅಭಿವೃದ್ಧಿ ನಿಧಿ | 1% | 2,74,750.76 |
| 4. | 2017–18ನೇ ಸಾಲಿಗೆ ಲಾಭಾಂಶ ಹಂಚಿಕೆ (ಡಿವಿಡೆಂಡ್) | 10% | 1,36,86,544.00 |
| 5. | ಧರ್ಮಾರ್ಥ ದತ್ತ ನಿಧಿ | 10% | 26,65,082.35 |
| 6. | Special Reserve under Section 36(1)(viii) of Income Tax Act | | 34,77,362.00 |
| 7. | ಹೂಡಿಕೆ ಏರಿಳಿತ ಮೀಸಲು (Investment Fluctuation Reserve) | | 8,25,000.00 |
| 8. | ಹಂಚಿ ಉಳಿದ ಮೊತ್ತ ಮೀಸಲು ನಿಧಿಗೆ | | 59,96,835.15 |
| | ಒಟ್ಟು | | 3,66,33,434.37 |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

12.06.2018 ಮಹಾಪ್ರಬಂಧಕರು (ಪ್ರ)

ಕಾರ್ಯಸೂಚಿ – 7

## ಬಜೆಟಿನ ಮಿತಿಗಿಂತ ಮೀರಿದ ವೆಚ್ಚಗಳ ಮಂಜೂರಾತಿ

| | | ಅಂದಾಜು<br>ರೂ. ಪೈ. | ವ್ಯಯವಾದುದು<br>ರೂ. ಪೈ. | ಹೆಚ್ಚುವರಿ<br>ರೂ. ಪೈ |
|---|---|---|---|---|
| 1. | ಮುದ್ರಣ ಮತ್ತು ಲೇಖನ ಸಾಮಗ್ರಿ | 10,00,000.00 | 11,07,722.71 | 1,07,722.71 |
| 2. | ಗ್ರಾಚುವಿಟಿ ಬಗ್ಗೆ | 17,00,000.00 | 29,53,406.24 | 12,53,406.24 |
| 3. | ಹೂಡಿಕೆಗಳ ಮೇಲೆ ಪ್ರೀಮಿಯಂ | 10,11,000.00 | 10,95,700.00 | 84,000.00 |
| 4. | ಬ್ಯಾಂಕಿಂಗೇತರ ಆಸ್ತಿಗಳ ಮಾರಾಟದಿಂದ ಆದ ನಷ್ಟ | 1,00,000.00 | 1,59,874.00 | 59,874.00 |
| 5. | ಸಿಬ್ಬಂದಿ ಗಳಿಕೆ ರಜೆ ಅನುವು | 5,00,000.00 | 5,66,281.00 | 66,281.00 |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

12.06.2018 ಮಹಾಪ್ರಬಂಧಕರು (ಪ್ರ)

**ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದನ್ವಯ ಸಾಲದ ಕಂತುಗಳು ಬಾರದೇ ಕಟ್‌ಬಾಕಿ ಆದಲ್ಲಿ ಸಾಲದ ಮೊತ್ತದಷ್ಟು ರಕಮನ್ನು ಸಂಶಯಾಸ್ಪದ ಸಾಲದ ನಿಧಿಗೆ ಕಾಯ್ದಿರಿಸುವುದು ಕಡ್ಡಾಯವಾಗಿರುತ್ತದೆ. ಇದರಿಂದ ಬ್ಯಾಂಕಿನ ಲಾಭದ ಪ್ರಮಾಣ ಕಡಿಮೆಯಾಗುವುದು. ಕಾರಣ ಸಾಲದ ಕಂತನ್ನು ನಿಗದಿತ ವೇಳೆಗೆ ಕಟ್ಟಲು ಪ್ರತಿ ತಿಂಗಳಿಗೊಮ್ಮೆ ಅಸಲು ಮತ್ತು ಬಡ್ಡಿ ಹಣ ಪಾವತಿಸಿ. ಈ ದಿಶೆಯಲ್ಲಿ ತಪ್ಪಿದರೆ ಮುಂದೆ ತಾವು ಪಡೆಯುವ ಸಾಲ ಸೌಲಭ್ಯದಿಂದ ವಂಚಿತರಾಗುವಿರಿ ಎಂದು ತಮ್ಮ ಗಮನಕ್ಕೆ ತರಬಯಸುತ್ತೇವೆ.**

# Amendment to the Byelaws

| ಸಂಖ್ಯೆ | ಬ್ಯಾಂಕಿನ ಪ್ರಸ್ತುತ ಉಪನಿಯಮ | ತಿದ್ದುಪಡಿ |
|---|---|---|
| 68 | **ನೌಕರರ ಸೇವಾ ಷರತ್ತುಗಳು :**<br>(1) ನೇರ ನೇಮಕಾತಿ :<br>(ಎ) ಬ್ಯಾಂಕಿನ ಆಡಳಿತ ಮಂಡಲಿಯು, ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಪರಿಚಲನೆಯನ್ನುಳ್ಳ ಎರಡು ಕನ್ನಡ ಮತ್ತು ಒಂದು ಆಂಗ್ಲ ಪತ್ರಿಕೆಯನ್ನು ಒಳಗೊಂಡಂತೆ ಮೂರು ವಾರ್ತಾಪತ್ರಿಕೆಗಳಲ್ಲಿ ಅಧಿಸೂಚಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳ ಲಿಖಿತ ಪರೀಕ್ಷೆ, ಸಹಜಶಕ್ತಿ (aptitude) ಪರೀಕ್ಷೆ ಮತ್ತು ಸಂದರ್ಶನಗಳನ್ನುಳ್ಳ ಒಂದು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಿ ಯಾವುದೇ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡತಕ್ಕದ್ದು. ದ್ವಿತೀಯ ವಿಭಾಗ ಸಹಾಯಕ ಮತ್ತು ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಒಟ್ಟು 200 ಅಂಕಗಳಿದ್ದು ಅದರಲ್ಲಿ ಕನ್ನಡ ಭಾಷೆಗೆ 50 ಅಂಕಗಳು, ಸಾಮಾನ್ಯ ಆಂಗ್ಲಭಾಷೆಗೆ 25 ಅಂಕಗಳು, ಸಾಮಾನ್ಯ ಜ್ಞಾನಕ್ಕೆ 25 ಅಂಕಗಳು, ಸಹಕಾರ ವಿಷಯಗಳಿಗೆ 50 ಅಂಕಗಳು, ಭಾರತದ ಸಂವಿಧಾನದ ವಿಷಯಕ್ಕೆ 25 ಅಂಕಗಳು ಮತ್ತು ಬ್ಯಾಂಕಿನ ಚಟುವಟಿಕೆಗೆ ಸಂಬಂಧಿಸಿದ ವಿಷಯಕ್ಕೆ 25 ಅಂಕಗಳು ಇರತಕ್ಕದ್ದು. ಕಂಪ್ಯೂಟರ್ ಪ್ರೋಗ್ರಾಮರ್, ಡಾಟಾ ಎಂಟ್ರಿ ಆಪರೇಟರ್, ಸ್ಟೇನೊಗ್ರಾಫರ್ ಮತ್ತು ಬೆರಳಚ್ಚುದಾರ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಭಾರತದ ಸಂವಿಧಾನ, ಸಹಕಾರ ಮತ್ತು ಬ್ಯಾಂಕಿನ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳ ಬದಲಾಗಿ ಗಣಕಯಂತ್ರ ಪರೀಕ್ಷೆ ಮತ್ತು ಶೀಘ್ರಲಿಪಿ ಅಥವಾ ಬೆರಳಚ್ಚಿಗೆ ಸಂಬಂಧಿಸಿದ ವಿಷಯಗಳಿಗೆ 100 ಅಂಕಗಳು ಇರತಕ್ಕದ್ದು. **ಲಿಖಿತ ಪರೀಕ್ಷೆಗೆ ಅಭ್ಯರ್ಥಿಗಳನ್ನು ಸೂಚಿಸಿದ ಹುದ್ದೆಯ 1:20ರ ಅನುಪಾತದಲ್ಲಿ ಕರೆಯಬೇಕು.** ಲಿಖಿತ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5ರ ಅನುಪಾತದಲ್ಲಿ ಸಂದರ್ಶಕ್ಕಾಗಿ ಕರೆಯಬೇಕು.<br>**(8) ವರ್ಗಾವಣೆ ಮತ್ತು ಪದೋನ್ನತಿ :**<br>(i) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕಾಡರ್ ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗತಕ್ಕದ್ದು; | **ನೌಕರರ ಸೇವಾ ಷರತ್ತುಗಳು :**<br>(1) ನೇರ ನೇಮಕಾತಿ :<br>(ಎ) ಬ್ಯಾಂಕಿನ ಆಡಳಿತ ಮಂಡಲಿಯು, ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಪರಿಚಲನೆಯನ್ನುಳ್ಳ ಎರಡು ಕನ್ನಡ ಮತ್ತು ಒಂದು ಆಂಗ್ಲ ಪತ್ರಿಕೆಯನ್ನು ಒಳಗೊಂಡಂತೆ ಮೂರು ವಾರ್ತಾಪತ್ರಿಕೆಗಳಲ್ಲಿ ಅಧಿಸೂಚಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳ ಲಿಖಿತ ಪರೀಕ್ಷೆ, ಸಹಜಶಕ್ತಿ (aptitude) ಪರೀಕ್ಷೆ ಮತ್ತು ಸಂದರ್ಶನಗಳನ್ನುಳ್ಳ ಒಂದು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಿ ಯಾವುದೇ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡತಕ್ಕದ್ದು. ದ್ವಿತೀಯ ವಿಭಾಗ ಸಹಾಯಕ ಮತ್ತು ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಒಟ್ಟು 200 ಅಂಕಗಳಿದ್ದು ಅದರಲ್ಲಿ ಕನ್ನಡ ಭಾಷೆಗೆ 50 ಅಂಕಗಳು, ಸಾಮಾನ್ಯ ಆಂಗ್ಲಭಾಷೆಗೆ 25 ಅಂಕಗಳು, ಸಾಮಾನ್ಯ ಜ್ಞಾನಕ್ಕೆ 25 ಅಂಕಗಳು, ಸಹಕಾರ ವಿಷಯಗಳಿಗೆ 50 ಅಂಕಗಳು, ಭಾರತದ ಸಂವಿಧಾನದ ವಿಷಯಕ್ಕೆ 25 ಅಂಕಗಳು ಮತ್ತು ಬ್ಯಾಂಕಿನ ಚಟುವಟಿಕೆಗೆ ಸಂಬಂಧಿಸಿದ ವಿಷಯಕ್ಕೆ 25 ಅಂಕಗಳು ಇರತಕ್ಕದ್ದು. ಕಂಪ್ಯೂಟರ್ ಪ್ರೋಗ್ರಾಮರ್, ಡಾಟಾ ಎಂಟ್ರಿ ಆಪರೇಟರ್, ಸ್ಟೇನೊಗ್ರಾಫರ್ ಮತ್ತು ಬೆರಳಚ್ಚುದಾರ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಭಾರತದ ಸಂವಿಧಾನ, ಸಹಕಾರ ಮತ್ತು ಬ್ಯಾಂಕಿನ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳ ಬದಲಾಗಿ ಗಣಕಯಂತ್ರ ಪರೀಕ್ಷೆ ಮತ್ತು ಶೀಘ್ರಲಿಪಿ ಅಥವಾ ಬೆರಳಚ್ಚಿಗೆ ಸಂಬಂಧಿಸಿದ ವಿಷಯಗಳಿಗೆ 100 ಅಂಕಗಳು ಇರತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5ರ ಅನುಪಾತದಲ್ಲಿ ಸಂದರ್ಶಕ್ಕಾಗಿ ಕರೆಯಬೇಕು.<br>**(8) ವರ್ಗಾವಣೆ ಮತ್ತು ಪದೋನ್ನತಿ :**<br>(i) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕಾಡರ್ ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗತಕ್ಕದ್ದು; |

| ಸಂಖ್ಯೆ | ಬ್ಯಾಂಕಿನ ಪ್ರಸ್ತುತ ಉಪನಿಯಮ | ತಿದ್ದುಪಡಿ |
|---|---|---|
| | ಪರಂತು, ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ಡಿಪ್ಲೋಮಾವನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ: ಸಹಕಾರಿ ನಿರ್ವಹಣೆಯಲ್ಲಿ ಹೆಚ್ಚಿನ ಡಿಪ್ಲೊಮಾ (ಹೆಚ್.ಡಿ.ಸಿ.ಎಮ್), ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಸಿ.ಬಿ.ಎಮ್) ಪಟ್ಟಣ ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಯು.ಸಿ.ಬಿ.ಎಮ್) ಸಹಕಾರ ನಿರ್ವಹಣೆಯಲ್ಲಿ ಸಾಮಾನ್ಯ ಡಿಪ್ಲೊಮಾ (ಜೆಡಿಸಿ) ಸಹಕಾರದಲ್ಲಿ ಡಿಪ್ಲೊಮಾ (ಡಿಸಿಎಮ್) ಮತ್ತು ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನ ತರಬೇತಿಗೆ ನಿಯೋಜಿಸತಕ್ಕದ್ದು ಮತ್ತು ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ. | ಪರಂತು, **ಜುಲೈ 29, 2019ರ ನಂತರ** ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ಡಿಪ್ಲೋಮಾವನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ: ಸಹಕಾರಿ ನಿರ್ವಹಣೆಯಲ್ಲಿ ಹೆಚ್ಚಿನ ಡಿಪ್ಲೊಮಾ (ಹೆಚ್.ಡಿ.ಸಿ.ಎಮ್), ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಸಿ.ಬಿ.ಎಮ್) ಪಟ್ಟಣ ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಯು.ಸಿ.ಬಿ.ಎಮ್) ಸಹಕಾರ ನಿರ್ವಹಣೆಯಲ್ಲಿ ಸಾಮಾನ್ಯ ಡಿಪ್ಲೊಮಾ (ಜೆಡಿಸಿ) ಸಹಕಾರದಲ್ಲಿ ಡಿಪ್ಲೊಮಾ (ಡಿಸಿಎಮ್) ಮತ್ತು ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನ ತರಬೇತಿಗೆ ನಿಯೋಜಿಸತಕ್ಕದ್ದು. ಮತ್ತು ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ. |

**ತಿದ್ದುಪಡಿಗೆ ಕಾರಣ :** ಸಹಕಾರ ಸಂಘಗಳ ನಿಯಮಗಳಿಗೆ ಆದ ತಿದ್ದುಪಡಿಯಂತೆ

2013–14 ರಿಂದ 2016–17ನೇ ಸಾಲಿನ ಲಾಭಾಂಶವನ್ನು (ಡಿವಿಡೆಂಡ್) ಪಡೆಯದ ಸದಸ್ಯರು ತಮ್ಮ ಹತ್ತಿರದ ಶಾಖೆಗಳನ್ನು ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಿ ಪಡೆಯಬೇಕಾಗಿ ವಿನಂತಿ. ಲಾಭಾಂಶವನ್ನು ಘೋಷಿಸಿದ ತಾರೀಕಿನಂದ 3 ವರ್ಷದ ಒಳಗಾಗಿ ಸದಸ್ಯರು ಲಾಭಾಂಶವನ್ನು (ಡಿವಿಡೆಂಡ್) ಪಡೆಯದೇ ಇದ್ದಲ್ಲಿ ನಿಯಮಗಳಿಗನುಸಾರವಾಗಿ ಅಂತಹ ಮೊಬಲಗನ್ನು ಮೀಸಲು ನಿಧಿಗೆ (ರಿಸರ್ವ್ ಫಂಡ್) ಜಮಾ ಮಾಡಲಾಗುವುದು. **ಅದ್ದರಿಂದ ಸದಸ್ಯರು ಡಿವಿಡೆಂಡ್ ಪಡೆಯಲು ಇದೇ ಅಂತಿಮ ನೋಟಿಸು ಎಂದು ಪರಿಗಣಿಸುವುದು**. ಈ ಬಗ್ಗೆ ಸದಸ್ಯರಿಗೆ ಪ್ರತ್ಯೇಕ ನೋಟಿಸು ಕಳುಹಿಸಲಾಗುವುದಿಲ್ಲ.

ಸದಸ್ಯರ ವಿಳಾಸದಲ್ಲಿ ಹಾಗೂ ಸಹಿಯಲ್ಲಿ ಬದಲಾವಣೆಯಾದಲ್ಲಿ ತಕ್ಷಣ ಆಡಳಿತ ಕಛೇರಿಗೆ ಭೇಟಿ ನೀಡಿ ತಮ್ಮ ಸದಸ್ಯತ್ವದ ಪಟ್ಟಿಯಲ್ಲಿ ವಿಳಾಸ ಹಾಗೂ ಸಹಿಯನ್ನು ಬದಲಾಯಿಸಿ. ಕೆಲವು ಸದಸ್ಯರಿಗೆ ಕಳುಹಿಸಿದ ವಾರ್ಷಿಕ ವರದಿ ಪುಸ್ತಕ ಮತ್ತು ಇತರ ಪತ್ರ ವ್ಯವಹಾರಗಳು, 'ಬಿಟ್ಟಿದ್ದಾರೆ, (left) ವಿಳಾಸದ ಕೊರತೆ (insufficient address), ಗೊತ್ತಿಲ್ಲ (not known), ನಿಧನರಾಗಿದ್ದಾರೆ (deceased)' ಎಂಬ ಅಂಚೆಯ ಷರಾದೊಂದಿಗೆ ಹಿಂದೆ ಬರುತ್ತಿದ್ದು, ಸದಸ್ಯರಿಗೆ ವಾರ್ಷಿಕ ವರದಿ ತಲುಪದಿದ್ದಲ್ಲಿ ಆಡಳಿತ ಕಛೇರಿಗೆ ಭೇಟಿ ನೀಡಿ ವಿಳಾಸವನ್ನು ಪರಿಶೀಲಿಸಿ, ವಾರ್ಷಿಕ ವರದಿಯನ್ನು ಪಡೆಯಲು ಕೋರಲಾಗಿದೆ.

ಅದಾಯ ಕರ ಕಾನೂನು ಪ್ರಕಾರ ಸದಸ್ಯ ಠೇವುದಾರರ ಠೇವುಗಳ ಮೇಲಿನ ಬಡ್ಡಿ ರು. 10,000/– (ಸಾಮಾನ್ಯ ನಾಗರಿಕರು) ರು. 50,000/– (ಹಿರಿಯ ನಾಗರಿಕರು) ಹಾಗೂ ಅದಕ್ಕಿಂತ ಹೆಚ್ಚಾದಲ್ಲಿ ಸಾಮಾನ್ಯ ನಾಗರಿಕರು ಫಾರಂ ನಂ. 15G, ಹಿರಿಯ ನಾಗರಿಕರು ಫಾರಂ ನಂ 15H ಕೊಡಬೇಕು. ಸದರಿ ಫಾರ್ಮು ನೀಡುವವರಿಗೆ ಪ್ಯಾನ್ ಕಾರ್ಡ್ ಕಡ್ಡಾಯವಾಗಿರುತ್ತದೆ. ಇಲ್ಲದ್ದಿದ್ದಲ್ಲಿ ಠೇವುದಾರರು TDS ಕಟ್ಟಬೇಕಾಗುತ್ತದೆ.